# ಕರ್ನಾಟಕ ಲೋಕಾಯುಕ್ತ

**ನಂ.ಕಂಪ್ಲೆಂಟ್/ಉಪಲೋಕ್/ಎಂವೈಎಸ್-6739/2014/ಡಿಆರ್‌ಇ-1**

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ : 6/7/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ.ಶಿವಣ್ಣ, ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ, ಇವರ ವಿರುದ್ಧ ಸಲ್ಲಿಸಿದ ದೂರಿನ ಸಂಬಂಧ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1) ರಡಿಯಲ್ಲಿನ ವರದಿ.

******

1) ಶ್ರೀ.ಎಂ.ಎಸ್.ಪಂಚಾಕ್ಷರಿ ಬಿನ್ ಶಿವಪ್ಪಶೆಟ್ಟಿ, ಮೆಣಸಿನಮಲ್ಲೇದೇವರಹಳ್ಳಿ, ಮೂಗ್ತಿಹಳ್ಳಿ ಅಂಚೆ, ಶಿರಗುಂದ ದಾಖಲೆ, ಚಿಕ್ಕಮಗಳುರು ತಾಲ್ಲೂಕು ಮತ್ತು ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ಶಿವಣ್ಣ, ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು ಮತ್ತು ಜಿಲ್ಲೆ, ಇವರ (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ಈ ದೂರನ್ನು ಗೌರವಾನ್ವಿತ ಲೋಕಾಯುಕ್ತರವರ ಚಿಕ್ಕಮಗಳೂರು ಪ್ರವಾಸದ ಸಂದರ್ಭದಲ್ಲಿ ಸಲ್ಲಿಸಿದ್ದು, ಸದರಿ ದೂರಿನಲ್ಲಿ ದೂರುದಾರರು ಚಿಕ್ಕಮಗಳೂರು ತಾಲ್ಲೂಕು, ಕಸಬಾ ಹೋಬಳಿ, ಶಿರಗುಂದ ಗ್ರಾಮದ ಸ.ನಂ.8 ರ ಗೋಮಾಳ ಜಾಗ, ಕೆರೆ, ಸ್ಮಶಾನದ ಜಾಗವನ್ನು ಕೆ.ಎಂ.ರೇವಣಸಿದ್ದಯ್ಯ ಎಂಬ ಉಪನ್ಯಾಸಕರು ತಮ್ಮ ಕುಟುಂಬಕ್ಕೆ 6 ಬಾರಿ ದರಖಾಸ್ತು ಮಾಡಿಸಿಕೊಂಡಿರುತ್ತಾರೆ. ಸದರಿಯವರಿಗೆ 6 ಬಾರಿ ದರಖಾಸ್ತು ಆಗಿರುವ ಜಾಗವನ್ನು ವಜಾ ಮಾಡಿ ದನಕರುಗಳು ನೀರು ಕುಡಿಯಲು, ಹುಲ್ಲು ಮೇಯಲು, ಗ್ರಾಮದ ಗೋಮಾಳ ಸ್ಮಶಾನ, ಕೆರೆ ಉಳಿಸಿಕೊಡಬೇಕೆಂದು ಕೋರಿರುತ್ತಾರೆ.

3) ದೂರುದಾರರ ದೂರಿನ ಮೇಲೆ ಕ್ರಮ ಕೈಗೊಂಡು ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿಗಳಿಗೆ ಆದೇಶಿಲಾಗಿತ್ತು. ಚಿಕ್ಕಮಗಳೂರು ಜಿಲ್ಲಾಧಿಕಾರಗಳು ತಮ್ಮ ವರದಿಯಲ್ಲಿ ಶಿರಗುಂದ ಗ್ರಾಮದ ಸ.ನಂ.8 ರಲ್ಲಿ ಸರ್ಕಾರಿ ಗೋಮಾಳ ವರ್ಗದ ಜಮೀನಿದ್ದು, ಅದರಲ್ಲಿ ಶ್ರೀಮತಿ.ಮಲ್ಲಮ್ಮ ಇವರಿಗೆ 4.30 ಎಕರೆ ಹಾಗೂ ಶ್ರೀಮತಿ.ರಾಜಮ್ಮ ಕೋಂ ರೇವಣಸಿದ್ದಯ್ಯ ಇವರಿಗೆ 4.26 ಎಕರೆ ಜಮೀನನ್ನು 1983-84 ರಲ್ಲಿ ಮಂಜೂರಿ ಮಾಡಿದ್ದು, ನಂತರ ಅದೇ ಮಂಜೂರಿದಾರರಿಗೆ ಅದೇ ಸರ್ವೆ ನಂಬರಿನಲ್ಲಿ ತಲಾ 4.38 ಎಕರೆ ದರಖಾಸ್ತು ಮಂಜೂರಿ ಮಾಡಲಾಗಿದೆಯೆಂದು, ಸದರಿ ಜಮೀನುಗಳ ಪಕ್ಕಾ ಪೋಡಿಯಾಗಿ ಹೊಸ ನಂ.179, 180, 181 ಮತ್ತು 182 ಆಗಿದ್ದು, ನಂತರದಲ್ಲಿ ಮಲ್ಲಮ್ಮ ಇವರಿಗೆ ಮಂಜೂರಾಗಿದ್ದ 4.38 ಎಕರೆ ಜಮೀನು ವಿಲ್ ಮೂಲಕ ಮಗನಾದ ಶ್ರೀ.ರೇವಣಸಿದ್ದಯ್ಯ ಇವರಿಗೆ ಖಾತೆ ದಾಖಲಿಸಲಾಗಿದೆಯೆಂದು ಹಾಗೂ

ಸ.ನಂ.8 ರಲ್ಲಿ ಕೆರೆ ಏರಿಯನ್ನು ನಿರ್ಮಿಸಿ ದಾರಿಗೆ ಅಡ್ಡಿಪಡಿಸಿರುವ ಜಾಗವನ್ನು ಗ್ರಾಮಸ್ಥರ ಸಮಕ್ಷಮ ಖುಲ್ಲಾ ಪಡಿಸಲಾಗಿದೆಯೆಂದು ಉಪ ವಿಭಾಗಾಧಿಕಾರಿಗಳು ವರದಿ ನೀಡಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದು ಯಾವುದೇ ಕೆರೆ, ಸ್ಮಶಾನ, ಗೋಮಾಳ ಒತ್ತುವರಿಯಾಗಿರುವುದಿಲ್ಲ. ಕೆರೆಗೆ ಯಾವುದೇ ನಕಾಶೆ ಕಂಡ ದಾರಿ ಇರುವುದಿಲ್ಲ ಹಾಗೂ ಕೆರೆಗೆ ಅಡ್ಡಲಾಗಿ ವಡ್ಡು ನಿರ್ಮಿಸಲಾಗಿದೆಯೆಂದು ತಹಶೀಲ್ದಾರ್‌ರವರು ವರದಿ ಮಾಡಿರುತ್ತಾರೆಂದು ಹೇಳಿರುತ್ತಾರೆ.

4) ಜಿಲ್ಲಾಧಿಕಾರಿಗಳ ವರದಿಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ತನ್ನ ಪ್ರತ್ಯುತ್ತರದಲ್ಲಿ ರೇವಣಸಿದ್ದಯ್ಯ ಎನ್ನುವರು ನಿವೃತ್ತ ಸರ್ಕಾರಿ ನೌಕರನಾಗಿದ್ದು, ಅಕ್ರಮವಾಗಿ ಕೆರೆ, ಸ್ಮಶಾನ, ಗೋಮಾಳ ಜಾಗವನ್ನು ಒತ್ತುವರಿ ಮಾಡಿಕೊಂಡು, ಕೆಳಭಾಗದ ಜಮೀನಿನ ರೈತರಿಗೆ ಕೆರೆ ನೀರು ಬಿಡದೆ ಏರಿ ನಿರ್ಮಿಸಿದ್ದು, ಪಂಪ್‌ಸೆಟ್ ಮೂಲಕ ತನ್ನ ಕಾಫಿ ತೋಟಕ್ಕೆ ಕೆರೆಯ ನೀರನ್ನು ಉಪಯೋಗಿಸುತ್ತಿದ್ದಾರೆ. ಸ್ಮಶಾನವನ್ನು ಅತಿಕ್ರಮಿಸಿಕೊಂಡಿದ್ದು, ಶವಗಳನ್ನು ರಸ್ತೆ ಬದಿಯಲ್ಲಿ ಹೂಳುವಂತಾಗಿದೆ. ಅಧಿಕಾರಿಗಳು ಲಂಚದ ಅವೇಶಕ್ಕೆ ಒಳಗಾಗಿ ಬಂದ ಅರ್ಜಿಗಳನ್ನು ಅಲ್ಲೆ ಉಳಿಯುವಂತೆ ಮಾಡುತ್ತಾರೆ. ಆದ್ದರಿಂದ, ಬಡವರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿರುತ್ತಾರೆ. ಆದ್ದರಿಂದ, ದೂರಿನಲ್ಲಿ ನಮೂದಿಸಿರುವ ಜಮೀನಿನ ಮಂಜೂರಾತಿಯ ಬಗ್ಗೆ ದಾಖಲಾತಿಗಳನ್ನು ಸಲ್ಲಿಸುವಂತೆ ತಹಶೀಲ್ದಾರ್, ಚಿಕ್ಕಮಗಳೂರು ಇವರಿಗೆ ಆದೇಶಿಸಲಾಗಿತ್ತು.

5) ತಹಶೀಲ್ದಾರ್, ಚಿಕ್ಕಮಗಳೂರು ತಾಲ್ಲೂಕು ಇವರು ಹಾಜರಾಗಿ ಹೇಳಿಕೆಯನ್ನು ನೀಡಿದ್ದು, ತನ್ನ ಹೇಳಿಕೆಯಲ್ಲಿ ರೇವಣಸಿದ್ದಯ್ಯ ಇವರ ತಾಯಿ ಮಲ್ಲಮ್ಮ ಇವರಿಗೆ ದಿ.14/10/1983 ರಲ್ಲಿ 4.30 ಎಕರೆ ಮತ್ತು ಶ್ರೀಮತಿ.ವಿ.ರಾಜಮ್ಮ ಇವರಿಗೆ ದಿ.14/10/1983 ರಲ್ಲಿ 4.26 ಎಕರೆ ಜಮೀನನ್ನು ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಮಂಜೂರು ಮಾಡಲಾಗಿದೆ. ಅದೇ ಅರ್ಜಿದಾರರು ದರಖಾಸ್ತು ಕೋರಿಕೆಯ ಮೇಲೆ ಸಲ್ಲಿಸಿರುವ ಅರ್ಜಿಯನ್ನು ಪರಿಗಣಿಸಲು ರಹ ಇರುವುದಿಲ್ಲವೆಂದು ತಹಶೀಲ್ದಾರ್, ಚಿಕ್ಕಮಗಳೂರು ಇವರು ದಿ.27/10/1988 ರಲ್ಲಿ ಅರ್ಜಿದಾರರಿಗೆ ಹಿಂಬರಹ ನೀಡಿ ಕಡತವನ್ನು ವಿಲೇ ಇಟ್ಟಿರುತ್ತಾರೆ. ಸದರಿ ಆದೇಶದ ವಿರುದ್ಧ ಅರ್ಜಿದಾರರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ರಿವಿಜನ್ ಪಿಟಿಷನ್ ಅರ್ಜಿ ಸಲ್ಲಿಸಿದ್ದು, ಅದು ವಜಾಗೊಂಡಿರುತ್ತದೆ. ನಂತರದಲ್ಲಿ ಅರ್ಜಿದಾರರು ಕರ್ನಾಟಕ ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಉಚ್ಚ ನ್ಯಾಯಾಲಯದಿಂದ ಆದ ನಿರ್ದೇಶನ ಹಾಗೂ ಸರ್ಕಾರದ ಸೂಚನೆಯಂತೆ ತಲಾ 4.38 ಎಕರೆ ಜಮೀನನ್ನು ಮಲ್ಲಮ್ಮ ಮತ್ತು ರಾಜಮ್ಮ ಇವರಿಗೆ ಮಂಜೂರು ಮಾಡಲಾಗಿದೆಯೆಂದು ಹೇಳಿರುತ್ತಾರೆ.

6) ತಹಶೀಲ್ದಾರ್‌ರವರು ನೀಡಿರುವ ವರದಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ, ಶಿರಗುಂದ ಗ್ರಾಮದ ಸ.ನಂ.8 ರಲ್ಲಿ ಮಲ್ಲಮ್ಮ ಕೋಂ ಬಸವಯ್ಯ ಇವರಿಗೆ 4.30 ಎಕರೆ ಮತ್ತು ಶ್ರೀಮತಿ.ರಾಜಮ್ಮ ಕೋಂ ರೇವಣಸಿದ್ದಯ್ಯ ಇವರಿಗೆ 4.26 ಎಕರೆ ಜಮೀನನ್ನು ಅನಧಿಕೃತ ಸಾಗುವಳಿ ಸಕ್ರಮಗೊಳಿಸಿ ಖಾಯಂ ಮಂಜೂರಾತಿ ನೀಡಿ ಸಾಗುವಳಿ ಚೀಟಿ ನಂ.31/.83-84 ಮತ್ತು 30/83-84 ರಂತೆ ಸಾಗುವಳಿ ಚೀಟಿ ನೀಡಿರುವುದು ಕಂಡುಬರುತ್ತದೆ. ನಂತರದಲ್ಲಿ ಮೇಲೆ ತಿಳಿಸಿದ ಮಲ್ಲಮ್ಮ ಮತ್ತು ರಾಜಮ್ಮ ಇವರುಗಳು ಅದೇ ಸರ್ವೆ ನಂಬರ್‌ನಲ್ಲಿ ತಲಾ 4.3 ಎಕರೆ ಪ್ರದೇಶವನ್ನು

ದರಖಾಸ್ತು ಮೂಲಕ ಮಂಜೂರಿ ಮಾಡಿಕೊಡಲು ಅರ್ಜಿ ನೀಡಿದ್ದು, ಸದರಿ ಅರ್ಜಿಯನ್ನು ತಹಶೀಲ್ದಾರ್‌ರವರು ತಿರಸ್ಕರಿಸಿದ್ದು, ಮತ್ತು ಆ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಮಂಜೂರಾತಿಗೆ ಕಾನೂನಿನಲ್ಲಿ ಅವಕಾಶವಿಲ್ಲವೆಂದು ಸರ್ಕಾರದವರು ಅವರ ಮನವಿಯನ್ನು ತಿರಸ್ಕರಿಸಿರುವುದು ಕಂಡುಬರುತ್ತದೆ. ಸರ್ಕಾರದ ಸೂಚನೆಯನ್ನು ಪ್ರಶ್ನಿಸಿ ಅರ್ಜಿದಾರರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ರಿವಿಜನ್ ಪಿಟಿಷನ್ 123/97 ನ್ನು ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ ಅರ್ಜಿದಾರರ ಮೇಲ್ಮನವಿಯನ್ನು ದಿ.24/6/99 ರಂದು ವಜಾಗೊಳಿಸಿರುವುದು ಕಂಡುಬರುತ್ತದೆ. ಸದರಿ ಆದೇಶದ ವಿರುದ್ಧ ಅರ್ಜಿದಾರರು ರಿಟ್ ಪಿಟಿಷನ್ ನಂ.45864-45865/1999 ರಂತೆ ರಿಟ್ ಅರ್ಜಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಅರ್ಜಿಯನ್ನು ಉಚ್ಚ ನ್ಯಾಯಾಲಯವು ಪುರಸ್ಕರಿಸಿ ಅರ್ಜಿದಾರರಿಗೆ ಅವಕಾಶವನ್ನು ನೀಡಿ, ವಿಚಾರಣೆ ನಡೆಸಿ ಸೂಕ್ತ ಆದೇಶ ಮಾಡುವಂತೆ ಕರ್ನಾಟಕ ಸರ್ಕಾರಕ್ಕೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ದಿ.27/4/2002 ರಲ್ಲಿ ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ, ಇವರು ತಮ್ಮ ಆದೇಶದಲ್ಲಿ ಕರ್ನಾಟಕ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಅರ್ಜಿದಾರರ ಮನವಿಯನ್ನು ಪರಿಶೀಲಿಸಿ ಮಲ್ಲಮ್ಮ ಮತ್ತು ರಾಜಮ್ಮರವರಿಗೆ ತಲಾ 4.3 ಎಕರೆ ಗೋಮಾಳ ಜಮೀನನ್ನು ಕರ್ನಾಟಕ ಭೂಕಂದಾಯ ನಿಯಮಾವಳಿಗಳು 1966 ರ ನಿಯಮ 97 ರನ್ವಯ ಗೋಮಾಳ ಶೀರ್ಷಿಕೆಯಿಂದ ತಗ್ಗಿಸಿ ಕರ್ನಾಟಕ ಭೂಮಂಜೂರಾತಿ ನಿಯಮಾವಳಿ 1969 ರ ನಿಯಮ 8 ರ ಪ್ರಕಾರ ಮಂಜೂರು ಮಾಡಲಾಗಿದೆಯೆಂದು ಆದೇಶಿಸಿರುವುದು ಕಂಡುಬರುತ್ತದೆ. ಸರ್ಕಾರದ ಆದೇಶದನ್ವಯ ಮುಂದಿನ ಕ್ರಮ ವಹಿಸಲು ಸೂಚಿಸಿ ಜಿಲ್ಲಾಧಿಕಾರಿಗಳು, ಚಿಕ್ಕಮಗಳೂರು ಇವರು ದಿ.17/5/2002 ರಂದು ತಹಶೀಲ್ದಾರ್, ಚಿಕ್ಕಮಗಳೂರು ಇವರಿಗೆ ನಿರ್ದೇಶನವನ್ನು ನೀಡಿರುವುದು ಕಂಡುಬರುತ್ತದೆ.

7) ಮೇಲಿನ ಅಂಶಗಳನ್ನು ಗಮನಿಸಿದಾಗ, ಅರ್ಜಿದಾರರಿಗೆ ಜಮೀನನ್ನು ಮಂಜೂರು ಮಾಡಬೇಕೆಂದು ಕರ್ನಾಟಕ ಉಚ್ಚ ನ್ಯಾಯಾಲಯವು ಆದೇಶವನ್ನು ಮಾಡಿರುವುದು ಕಂಡುಬಂದಿರುವುದಿಲ್ಲ. ಆದರೆ, ಅರ್ಜಿದಾರರ ಅರ್ಜಿಯನ್ನು ಪರಿಗಣಿಸಿ ನಿಯಮಾನುಸಾರ ಸೂಕ್ತ ಆದೇಶವನ್ನು ಮಾಡುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಿರುವುದು ಕಂಡುಬರುತ್ತದೆ. ಸದರಿ ಆದೇಶದ ಪೂರ್ವದಲ್ಲೇ ಅರ್ಜಿದಾರರಿಗೆ ತಲಾ 4.30 ಎಕರೆ ಜಮೀನನ್ನು ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಅರ್ಜಿದಾರರಿಗೆ ಮಂಜೂರು ಮಾಡಿದ್ದರಿಂದ, ಪುನಃ ಅದೇ ಸರ್ವೆ ನಂಬರಿನಲ್ಲಿ ಜಮೀನನ್ನು ಮಂಜೂರು ಮಾಡಲು ಅವಕಾಶವಿಲ್ಲವೆಂದು ಅಭಿಪ್ರಾಯ ಪಡುತ್ತೇನೆ. ಅರ್ಜಿದಾರರಿಗೆ ಮೊದಲೇ ತಲಾ 4.30 ಎಕರೆಯಂತೆ ಜಮೀನು ಮಂಜೂರಾಗಿದ್ದರಿಂದ, ಪುನಃ ಸದರಿ ಅರ್ಜಿದಾರರಿಗೆ ಜಮೀನನ್ನು ಮಂಜೂರು ಮಾಡಿರುವುದು ನಿಗದಿತ ವಿಸ್ತೀರ್ಣಕ್ಕಿಂತ ಹೆಚ್ಚು ಜಮೀನನ್ನು ಮಂಜೂರು ಮಾಡಿದಂತಾಗಿರುತ್ತದೆ ಮತ್ತು ನಿಯಮಾವಳಿಗಳ ಉಲ್ಲಂಘನೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ.

8) ತಹಶಿಲ್ದಾರ್‌ರವರು ಹಾಜರು ಪಡಿಸಿರುವ ದಾಖಲಾತಿಗಳನ್ನು ಪರಿಶೀಲಿಸಿದಾಗ, ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ಭೂ ಮಂಜೂರಾತಿ), ಇವರು ದಿ.27/4/2002 ರಲ್ಲಿ ಮಾಡಿರುವ ಆದೇಶದ ಪ್ರಕಾರ ಕಂದಾಯ ಅಧಿಕಾರಿಗಳು ಜಮೀನನ್ನು ಮಂಜೂರು ಮಾಡಿರುವುದು

ಕಂಡುಬರುತ್ತದೆ. ಅರ್ಜಿದಾರರಿಗೆ 1982 ರಲ್ಲಿ ಅನಧಿಕೃತ ಸಾಗುವಳಿಯನ್ನು ಸಕ್ರಮಗೊಳಿಸಿ ಜಮೀನು ಮಂಜೂರು ಮಾಡಿರುವ ಅಂಶವನ್ನು ಪರಿಗಣಿಸದೆ ಪುನಃ ಜಮೀನು ಮಂಜೂರು ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ ಆದೇಶವನ್ನು ಮಾಡಿರುವುದು ಕಂಡುಬಂದ ಕಾರಣ, ಶ್ರೀಮತಿ.ಮಲ್ಲಮ್ಮ ಮತ್ತು ಶ್ರೀಮತಿ.ರಾಜಮ್ಮ ಇವರುಗಳಿಗೆ ಶಿರಗುಂದ ಗ್ರಾಮದ ಸ.ನಂ.8 ರಲ್ಲಿ ತಲಾ 4.3 ಎಕರೆ ಗೋಮಾಳ ಜಮೀನನ್ನು ಮಂಜೂರು ಮಾಡಿ ದಿ.27/4/2002 ರಂದು ಆದೇಶ ಮಾಡಿರುವ ಶ್ರೀ.ಹೆಚ್.ಎಸ್.ಗಣೇಶಮೂರ್ತಿ, ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂ ಮಂಜೂರಾತಿ) ಇವರನ್ನು ಪಕ್ಷಗಾರರನ್ನಾಗಿ ಮಾಡಿ ಅವರಿಂದ ಆಕ್ಷೇಪಣೆಯನ್ನು ತರಿಸಲು ಆದೇಶವಾಗಿತ್ತು.

9) ಪೊಲೀಸ್ ಉಪ ನಿರೀಕ್ಷಕರು, ಬೆಂಗಳೂರು ನಗರ ವಿಭಾಗ, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ವರದಿಯನ್ನು ನೀಡಿದ್ದು, ವರದಿಯಲ್ಲಿ ಎದುರುದಾರರ ವಿಳಾಸಕ್ಕೆ ಹೋಗಿ ವಿಚಾರ ಮಾಡಲಾಗಿ, ಎದುರುದಾರರ ಮಗ ನರೇಂದ್ರ ಎಂಬುವರು ಅವರ ತಂದೆ ಗಣೇಶ್‌ಮೂರ್ತಿಯವರು 2013 ರಲ್ಲಿ ಮರಣ ಹೊಂದಿರುತ್ತಾರೆಂದು ತಿಳಿಸಿರುತ್ತಾರೆಂದು ವರದಿಯನ್ನು ನೀಡಿದ್ದು, ವರದಿಯ ಜೊತೆ ಹೆಚ್.ಗಣೇಶಮೂರ್ತಿ ಎನ್ನುವವರ ಮರಣ ಪ್ರಮಾಣ ಪತ್ರವನ್ನು ಕೂಡ ಹಾಜರು ಪಡಿಸಿರುತ್ತಾರೆ. ಆದ್ದರಿಂದ, ಎದುರುದಾರರಾದ ಗಣೇಶ್‌ಮೂರ್ತಿ ಇವರ ವಿರುದ್ಧ ಕ್ರಮ ಕೈಗೊಳ್ಳಲು ಅವಕಾಶವಿರುವುದಿಲ್ಲ.

10) ಮೇಲ್ಕಂಡ ಹಿನ್ನೆಲೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸಕ್ಷಮ ಪ್ರಾಧಿಕಾರಕ್ಕೆ ಮಲ್ಲಮ್ಮ ಮತ್ತು ರಾಜಮ್ಮ ಎಂಬುವರಿಗೆ ಅನಧಿಕೃತ ಸಾಗುವಳಿಯಡಿಯಲ್ಲಿ ನಿಗದಿತ ವಿಸ್ತೀರ್ಣಕ್ಕಿಂತ ಹೆಚ್ಚು ಜಮೀನನ್ನು ಮಂಜೂರು ಮಾಡಿರುತ್ತಾರೆಂದು ಮೇಲ್ನೋಟಕ್ಕೆ ಕಂಡುಬರುತ್ತಿದ್ದು, ನಿಗದಿತ ವಿಸ್ತೀರ್ಣಕ್ಕಿಂತ ಹೆಚ್ಚು ಜಮೀನನ್ನು ಅನಧಿಕೃತ ಸಾಗುವಳಿ ಹಿನ್ನೆಲೆಯಲ್ಲಿ ಮಂಜೂರು ಮಾಡಲು ಅವಕಾಶವಿಲ್ಲಲದಿರುವ ಕಾರನ ನಿಗದಿತ ವಿಸ್ತೀರ್ಣಕ್ಕಿಂದ ಹೆಚ್ಚಾಗಿ ಮಂಜೂರು ಮಾಡಿರುವ ಜಮೀನಿನ ಬಗ್ಗೆ ಸೂಕ್ತ ಕ್ರಮವನ್ನು ಸಕ್ಷಮ ಪ್ರಾಧಿಕಾರದವರು ಕೈಗೊಳ್ಳಬೇಕಾಗುತ್ತದೆ. ಆದ್ದರಿಂದ, ನಿಗದಿತ ವಿಸ್ತೀರ್ಣಕ್ಕಿಂತ ಹೆಚ್ಚಾಗಿ ಮಂಜೂರು ಮಾಡಿರುವ ಜಮೀನಿನ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಈ ಮೂಲಕ ಶಿಫಾರಸ್ಸು ಮಾಡಲಾಗಿರುತ್ತದೆ. ತದನಂತರ ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಅಲ್ಲಿಂದ ಒಂದು ತಿಂಗಳೊಳಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2) ರಡಿಯಲ್ಲಿ ಕೈಗೊಳ್ಳಲಾದ ಕ್ರಮದ ಬಗ್ಗೆ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

Sd/- 10/7/17.

(ನ್ಯಾಯಮೂರ್ತಿ ಸುಭಾಷ್ ಬಿ. ಆಡಿ)
ಉಪಲೋಕಾಯುಕ್ತರು-2,
ಕರ್ನಾಟಕ ರಾಜ್ಯ, ಬೆಂಗಳೂರು.